**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 24/2022

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮುರುಳಿ | | ಪಿಡಬ್ಲೂ - 05 |
| ತಂದೆಯ ಹೆಸರು | - ಹೊನ್ನೇಗೌಡ | | ಸಿಡಬ್ಲೂ - 03 |
| ವಯಸ್ಸು | - 42 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಹಾದಿಹಳ್ಳಿ | | |

ದಿನಾಂಕಃ 14.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.1 ಮತ್ತು ಚಾಸಾ.15 ಗೊತ್ತು.
2. ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ನನಗೆ ನೋಟೀಸನ್ನು ಕೊಟ್ಟು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಜರ್ ಜರುಗಿಸಲು ಪಂಚರಾಗಿ ಸಹಕರಿಸಬೇಕೆಂದು ಕೋರಿದ್ದರು. ಸದರಿ ನೋಟೀಸನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿಯು ನೋಟೀಸ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಕಬ್ಬಿನಹಳ್ಳಿ ಗ್ರಾಮದಲ್ಲಿರುವ ಚಾಸಾ.15 ರವರ ಕಾಫಿ ತೋಟದಲ್ಲಿ ಮಹಜರ್ ಜರುಗಿಸಲು ಬರಬೇಕೆಂದು ಕರೆದಿದ್ದರಿಂದ ನಾನು ಒಪ್ಪಿ ಅಲ್ಲಿಗೆ ಹೋದೆನು. ಅಲ್ಲಿಗೆ ಫ್ರಾಸಾ.1 ರವರು ಬಂದಿದ್ದರು. ಚಾಸಾ.15 ರವರ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡು ಅವರ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದ ಶೇಷಪ್ಪ ಎಂಬುವವರ ಕೊಲೆಯಾಗಿದೆ ಎಂದು ಹೇಳಿ ಪೊಲೀಸರು ಅಲ್ಲಿಗೆ ಮಹಜರ್ ಜರುಗಿಸಲು ನನ್ನನ್ನು ಕರೆಸಿದ್ದರು. ಸದರಿ ಶೇಷಪ್ಪನೊಂದಿಗೆ ಈ ದಿನ ವಿಡಿಯೋ ಕಾನ್ಪರೇನ್ಸಿಂಗ್ ಮೂಲಕ ಹಾಜರು ಪಡಿಸಿದ ಆರೋಪಿ ಸಹ ಅದೇ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದು ಆತನೇ ಶೇಷಪ್ಪನನ್ನು ಕೊಲೆ ಮಾಡಿರುವುದಾಗಿ ತಿಳಿಯಿತು. ಸದರಿ ಸ್ಥಳವನ್ನು ಚಾಸಾ.15 ರವರು ಪೊಲೀಸರಿಗೆ ತೋರಿಸಿದರು. ಅಲ್ಲಿ ಪೊಲೀಸರು ಮಹಜರನ್ನು ಜರುಗಿಸಿದರು. ಆ ಸಮಯದಲ್ಲಿ ಮೃತನ ಶವ ಸದರಿ ಮನೆಯೊಳಗೆ ನೆಲದ ಮೇಲೆ ಇತ್ತು. ಪೊಲೀಸರು ಅಡುಗೆ ಮನೆಯ ನೆಲದ ಮೇಲೆ ಇದ್ದ ರಕ್ತವನ್ನು ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಸಂಗ್ರಹಿಸಿದರು, ಗೋಡೆಯ ಮೇಲೆ ಚಿಮ್ಮಿದ್ದ ರಕ್ತವನ್ನು ಕೆರೆದು ಸಂಗ್ರಹಿಸಿದರು ಮತ್ತು ಗೋಡೆಯ ಮೇಲೆ ರಕ್ತವಿಲ್ಲದ ಜಾಗದಿಂದ ಸಹ ಗೋಡೆಯ ಕಣಗಳನ್ನು ಕೆರೆದು ಸಂಗ್ರಹಿಸಿದರು. ಮೃತ ದೇಹ ಬಿದ್ದಿದ್ದ ಸ್ಥಳದಲ್ಲಿದ್ದ ರಕ್ತವನ್ನು ಸಹ ಪೊಲೀಸರು ಹತ್ತಿಯಿಂದ ಒರೆಸಿ ಸಂಗ್ರಹಿಸಿದರು. ನಂತರ ಪೊಲೀಸರು ರಕ್ತದ ಕಲೆಯಾಗಿದ್ದ ನೀಲಿ ಬಣ್ಣ ಮಿಶ್ರಿತ ಒಂದು ಪ್ಲಾಸ್ಟಿಕ್ ಚೀಲ, ಮೃತ ದೇಹದ ಪಕ್ಕದಲ್ಲಿ ಬಿದ್ದಿದ್ದ ಅರ್ಧ ತೋಳಿನ

ಟೀಶರ್ಟು, ರಕ್ತದ ಕಲೆಯಾಗಿದ್ದ ಒಂದು ಬನಿಯನ್‌ನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಅವುಗಳನ್ನು ಪೊಲೀಸರು ಪ್ರತ್ಯೇಕವಾಗಿ ಪ್ಯಾಕ್ ಮಾಡಿಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಮು.ಮಾ.1 ರಿಂದ 7 ರ ಮೇಲೆ ಅಂಟಿಸಲಾಗಿದ್ದ ಚೀಟಿಗಳಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.1(ಬಿ) ರಿಂದ ಮು.ಮಾ.7(ಬಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪೊಲೀಸರು ಮಹಜರನ್ನು ಬೆಳಿಗ್ಗೆ 9.15 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಬರೆದುಕೊಂಡರು. ಸದರಿ ಮಹಜರಿಗೆ ನಾನು, ಪ್ರಾಸಾ.1 ಮತ್ತು ಚಾಸಾ-15 ರವರು ಸಹಿ ಮಾಡಿದ್ದೇವೆ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಸಾಕ್ಷಿಗೆ ಈಗಾಗಲೇ ನಿಪಿ.3 ರಿಂದ ಪಿ.5 ಎಂದು ಗುರುತಿಸಲಾಗಿರುವ ಫೋಟೋಗಳನ್ನು ತೋರಿಸಲಾಗಿ, ಅವುಗಳನ್ನು ಮೇಲೆ ಹೇಳಿದ ಸ್ಥಳದಲ್ಲಿ ಪೊಲೀಸರು ಮಹಜರ್ ಜರುಗಿಸುವ ಸಮಯದಲ್ಲಿ ತೆಗೆದಿದ್ದಾಗಿ ಅವುಗಳಲ್ಲಿ ಮೃತನ ಶವ ಕಂಡುಬರುವುದಾಗಿ ಮತ್ತು ನಿಪಿ.3 ಫೋಟೋದಲ್ಲಿ ತನ್ನ, ಪ್ರಾಸಾ.1, ಚಾಸಾ.15 ಮತ್ತು ಪೊಲೀಸರ ಇರುವಿಕೆ ಕಂಡು ಬರುವುದಾಗಿ ನುಡಿದಿರುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ